4) ಅರ್ಜಿಯನ್ನೊಪ್ಪಿಸುವುದು

* * * * *

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್) (ಸದಸ್ಯರು, ಅರ್ಜಿಗಳ ಸಮಿತಿ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜಮೀನು ಪರಭಾರೆ (ಪಿ.ಟಿ.ಸಿ.ಎಲ್.) ಕಾನೂನಿನಂತೆ, ಸರ್ಕಾರದ ಪರವಾನಗಿ ಪಡೆದು ಜಮೀನು ಮಾರಲು ಅವಕಾಶ ಇರುವುದರಿಂದ ಅದರಂತೆ ಜಮೀನು ಪರಭಾರೆಗೆ ಅವಕಾಶ ಮಾಡಿಕೊಡುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಅರ್ಜಿಯನ್ನು ಒಪ್ಪಿಸಲಾಯಿತು. ಈಗ ಶೂನ್ಯ ವೇಳೆ.

5) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

i) ಕಳಸಾ ಭಂಡೂರಿ ನಾಲಾ ಯೋಜನೆ ಬಗ್ಗೆ:

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕಳಸಾ ಭಂಡೂರಿ ನಾಲಾ ಯೋಜನೆ ಈ ಭಾಗದ ಒಂದು ಜ್ವಲಂತ ಸಮಸ್ಯೆ. ಹುಬ್ಬಳ್ಳಿ-ಧಾರವಾಡ ಹಾಗೂ ಸುತ್ತಮುತ್ತಲೂ ನೂರಾರು ಗ್ರಾಮಗಳಿಗೆ ಕುಡಿಯುವ ನೀರಿನ ಸಲುವಾಗಿ 7 $^{1}/_{2}$ ಟಿಎಂಸಿ ನೀರು ಬೇಕೆಂದು ಕಳಸಾ ಭಂಡೂರಿ ನಾಲಾ ಯೋಜನೆಯನ್ನು ನಿರೂಪಣೆ ಮಾಡಿದೆವು. ಅದು ಅನುಷ್ಠಾನವಾಗುವ ಹಂತದಲ್ಲಿದ್ದಾಗ Tribunal ಮುಂದೆ ಕೇಸು ಇದೆ. ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ಸಭೆಯನ್ನು ಕರೆದಿದ್ದರು. ಆ ಸಂದರ್ಭದಲ್ಲಿ ಈ ಏಳೂವರೆ ಟಿ.ಎಂ.ಸಿ. ನೀರು ಸಲುವಾಗಿ ಮಧ್ಯಂತರ ಆದೇಶವನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡಿ ಎಂಬ ಮಾತನ್ನು ಹೇಳಿದ್ದೆವು. ಈ ಬಗ್ಗೆ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಗೊತ್ತಾಗಲಿಲ್ಲ. ಅದೊಂದು. ಇನ್ನೊಂದು ಡಿಸೆಂಬರ್, ಇದೇ ತಿಂಗಳಿನಲ್ಲಿ ಮಹದಾಯಿ Tribunal ತನ್ನ ಕೆಲಸವನ್ನು